**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>**

C.C. No.258/2013
CW- 1 PW-1

ಹೆಸರು : ರೇವಣಸಿದ್ದಪ್ಪ
ತಂ/ಗಂ ಹೆಸರು : ರಾಣಪ್ಪ
ವಯಸ್ಸು : 58 ವರ್ಷ
ಉದ್ಯೋಗ : ಅಧೀಕ್ಷಕ ಅಭಿಯಂತರರು
ವಾಸ ಸ್ಥಳ : ರಾಯಚೂರು

---

**<u>ಪ್ರಮಾಣವಚನ ಭೋಧಿಸಲಾಯಿತು. ದಿಃ 13/10/2021</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ದಿಃ 30-6-2005 ರಿಂದ 16-9-2009 ರ ವರೆಗೆ ನಾನು ಜಿಲ್ಲಾ ಪಂಚಾಯತಿ ಇಂಜಿನೀರಿಂಗ್ ಉಪ ವಿಭಾಗ ಚಿತ್ತಾಪೂರನಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಕರ್ತವ್ಯ ನಿರ್ವಹಿಸುವ ಅವಧಿಯಲ್ಲಿ ದಾಖಲೆಗಳ್ನು ಪರಿಶೀಲಿಸಲಾಗಿ ಆರೋಪಿತನು ನಮ್ಮ ಕಚೇರಿಯಲ್ಲಿ 2003-04 ನೇ ಸಾಲಿನಲ್ಲಿ ಕಿರಿಯ ಅಭಿಯಂತರರು ಅಂತ ಕರ್ತವ್ಯ ನಿರ್ವಹಿಸಿದ್ದು, ಈ ಕೆಳಗೆ ಹೇಳಿದ ಕಾಮಗಾರಿಗಳಲ್ಲಿ ನಗದು ಹಣ ಮತ್ತು ಆಹಾರ ಧಾನ್ಯಗಳು ಧುರ್ಬಳಕೆ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ.

1. ವಾಡಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ.
2. ದೇವಜಿನಾಯಕ ತಾಂಡಾದಲ್ಲಿ ಪೈಪಲೈನ ಕಾಮಗಾರಿ.
3. ಇಂಗಳಗಿ ಗ್ರಾಮದಲ್ಲಿ ಸಮುದಾಯ ಭವನ ಕಟ್ಟಡ ಮತ್ತು ಗೋ ಕಟ್ಟ ಕಾಮಗಾರಿ.
4. ಗುರುಜಿನಾಯಕ ತಾಂಡಾದಲ್ಲಿ ತಡೆ ಗೋಡೆ ನಿರ್ಮಾಣ ಕಾಮಗಾರಿ.
5. ಕಡಬೂರ ಗ್ರಾಮದಲ್ಲಿ ಸಿಸಿ ರಸ್ತೆ ಕಾಮಗಾರಿ.
6. ಬಳವಡಿಗಿ ಗ್ರಾಮದಲ್ಲಿ ಸಿಸಿ ರಸ್ತೆ ಮತ್ತು ಗೋ ಕಟ್ಟ ನಿರ್ಮಾಣ ಕಾಮಗಾರಿ.
7. ಕೊಂಚೂರು ಗ್ರಾಮದಲ್ಲಿ ಎರಡು ಗೋ ಕಟ್ಟ ನಿರ್ಮಾಣ ಕಾಮಗಾರಿ.
8. ಹಲಕಟ್ಟ ಗ್ರಾಮದಲ್ಲಿ ರಸ್ತೆ ಮತ್ತು ಗೋ ಕಟ್ಟ ನಿರ್ಮಾಣ ಕಾಮಗಾರಿ.
9. ವಾಡಿ ಗ್ರಾಮದ ದಕ್ಷಿಣದಲ್ಲಿ ಮತ್ತು ಉತ್ತರದಲ್ಲಿ ಗೋ ಕಟ್ಟ ನಿರ್ಮಾಣ ಕಾಮಗಾರಿ.

ಈ ಮೇಲೆ ಹೇಳಿದ ಕಾಮಗಾರಿಗಳಿಗೆ 6,88,875/- ರೂಪಾಯಿ ಮೌಲ್ಯದ ಆಹಾರ

ಧಾನ್ಯ ಮತ್ತು ನಗದು ಹಣ 1,91,877/- ರೂಪಾಯಿಗಳನ್ನು ಧುರ್ಬಳಕೆ ಮಾಡಿಕೊಂಡಿದ್ದು ಯಾವುದೆ ಕಾಮಗಾರಿಗಳನ್ನು ಮಾಡಿರುವುದಿಲ್ಲ.

ಆರೋಪಿತನಿಗೆ ನಮ್ಮ ಕಾರ್ಯಾಲಯದಿಂದ ಹಲವು ಬಾರಿ ನೋಟಿಸುಗಳನ್ನು ನೀಡಿದರು ಸಹ ಅವುಗಳಿಗೆ ಉತ್ತರ ನೀಡಿರುವುದಿಲ್ಲ. ನಮ್ಮ ಕಾರ್ಯಾಲಯದ ಅಧಿಕಾರಿ ಶರಣಯ್ಯ ಸ್ವಾಮಿ ಎಂಬುವವರು ವಾಡಿ ಪೊಲೀಸ ಠಾಣೆಯಲ್ಲಿ ದಿಃ 18-6-2005 ರಂದು ಪಿರ್ಯಾದಿ ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಳ್ಳದೆ ಅದನ್ನು ಹಿಂದಿರುಗಿಸಿದ್ದರು. ನಂತರ ನಾನು ದಿಃ 16-9-2005 ರಂದು ವಾಡಿ ಪೊಲೀಸ ಠಾಣೆಗೆ ಹೋಗಿ ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಶರಣಯ್ಯ ಸ್ವಾಮಿ ನೀಡಿದ ಪಿರ್ಯಾದಿ ಪ್ರತಿ ಹಚ್ಚಿ ಒಂದು ಅರ್ಜಿಯನ್ನು ನೀಡಿರುತ್ತೇನೆ. ನಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ರಮಕೈಗೊಂಡಿರುತ್ತಾರೆ. ಸಾಕ್ಷಿಯು ತಾನು ಕೊಟ್ಟ ಅರ್ಜಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು , ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ CBA ವಕೀಲರಿಂದ -</u>**

ಆರೋಪಿತನು ಮರಿಯಪ್ಪ ಎಂಬ ಅಧಿಕಾರಿ ಇದ್ದಾಗ ಕಾಮಗಾರಿಗಳನ್ನು ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ಪರ ಮಂಜೂರು ಆದ ಮತ್ತು ಮಾಡಿರುವುದಿಲ್ಲ ಎಂದು ಹೇಳಿರುವ ಕಾಮಗಾರಿಗಳ ಬಗ್ಗೆ ದಾಖಲೆಗಳನ್ನು ಈ ಪ್ರಕರಣದಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಹಿಂದಿನ ಅಧಿಕಾರಿಗಳು ಪೊಲೀಸರಿಗೆ ನೀಡಿದ ಪಿರ್ಯಾದಿಯು ಆಧಾರ ರಹಿತವಾದುದ್ದು ಎಂದು ಅದನ್ನು ಮರಳಿ ಕೊಟ್ಟಿದ್ದರು ಎಂದರೆ ಸರಿ. ಮೇಲಿನ ಅಧಿಕಾರಿಗಳಿಂದ ಒತ್ತಡ ಬಂದಿದ್ದರಿಂದ ನಾನು ಪೊಲೀಸ ಠಾಣೆಗೆ ಹೋಗಿ ನಿಪಿ-1 ರಂತೆ ಪಿರ್ಯಾದಿ ನೀಡಿರುತ್ತೇನೆ ಎಂದರೆ ಸರಿ.

ನಾನು ಮಂಜೂರು ಆದ ಕಾಮಗಾರಿಗಳ ಸ್ಥಳಕ್ಕೆ ಹೋಗಿ ನೋಡಿರುವುದಿಲ್ಲ ಎಂದರೆ ಸರಿ. ಆರೋಪಿತನು ತನಗೆ ಮಂಜೂರು ಆದ ಕಾಮಗಾರಿಗಳನ್ನು ಪೂರ್ಣಗೊಳಿಸಿ ನಮ್ಮ ಕಚೇರಿಗೆ ಲೆಕ್ಕಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಹಿಂದಿನ ಅಧಿಕಾರಿಗಳು ಆರೋಪಿ ಕೊಟ್ಟ ದಾಖಲೆಗಳನ್ನು ಸ್ವೀಕರಿಸಲು ನಿರಾಕರಿಸಿ ಮುಂದೂಡುತ್ತ ಹೋಗಿದ್ದರು ಎಂದರೆ ಸರಿಯಲ್ಲ. ಆರೋಪಿತನು ಮಂಜೂರು ಆದ ಕಾಮಗಾರಿಗಳ ಹಣ ಮತ್ತು ಆಹಾರ ಧಾನ್ಯಗಳನ್ನು ಧರ್ಬಳಕೆ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಹಿಂದಿನ ಅಧಿಕಾರಿಗಳು ಆರೋಪಿ ವಿರುದ್ಧ ಹಣ ವಸೂಲಿ ಮಾಡಲು ಸಲ್ಲಿಸಿದ ಸಿವಿಲ್ ದಾವೆ ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಜೆ. ಎಂ. ಎಫ್.ಸಿ. ಚಿತ್ತಾಪೂರ.